ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

7

ಶಾಖೆ / ವಿಷಯ : DEPARTMENT / SUBJECT: ಕರ್ನಾಟಕ ವಿಧಾನ ಪರಿಷತ್

ಪತ್ರಿಕೆಯ ಹೆಸರು : NAME OF THE NEWS PAPER: ಕನ್ನಡಪ್ರಭ

ದಿನಾಂಕ : DATE : 25/6/2020

# ವರಿಷ್ಠರ ನಿಲುವಿನಂತೆ ಪರಿಷತ್ ನಾಮನಿರ್ದೇಶನ

## ವರಿಷ್ಠರ ಕೋಟಾ ಹೆಸರಿಗೆ ಕಾದ ಬಿಎಸ್‌ವೈ | ಇದರ ಮೇರೆಗೆ ತಮ್ಮ ಕೋಟಾದ ಹೆಸರು ಹೇಳಲಿರುವ ಸಿಎಂ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ವಿಧಾನಪರಿಷತ್ತಿನ ಐದು ನಾಮನಿರ್ದೇಶಿತ ಸದಸ್ಯರ ಅವಧಿ ಮುಗಿದ ಬೆನ್ನಲ್ಲೇ ಹೊಸದಾಗಿ ಯಾರನ್ನು ನಾಮಕರಣ ಮಾಡಲಾಗುತ್ತದೆ ಎಂಬ ಕುತೂಹಲ ಬಿಜೆಪಿಯಲ್ಲಿ ತೀವ್ರಗೊಳ್ಳುತ್ತಿದೆ.



ಇದೇ ತಿಂಗಳಾಂತ್ಯದಲ್ಲಿ ನಾಮಕರಣ ಸಾಧ್ಯತೆಯಿದೆ ಎಂಬ ಮಾತು ಬಿಜೆಪಿ ಪಾಳೆಯದಿಂದ ದಟ್ಟವಾಗಿ ಕೇಳಿಬರುತ್ತಿದ್ದು, ಅದಕ್ಕೂ ಮೊದಲು ಪಕ್ಷದ ಹೈಕಮಾಂಡ್ ಮತ್ತು ಸರ್ಕಾರದ ನಡುವೆ ಅನುಪಾತ ನಿಗದಿಯಾಗಬೇಕಾಗಿದೆ. ಅಂದರೆ, ಐದು ಸ್ಥಾನಗಳ ಪೈಕಿ ಪಕ್ಷದ ತಳಮಟ್ಟದ ಕಾರ್ಯಕರ್ತರು, ಸಂಘ ಪರಿವಾರದ ಸೈದ್ಧಾಂತಿಕ ಹಿನ್ನೆಲೆಯುಳ್ಳವರಿಗೆ ಎಷ್ಟು ಹಾಗೂ ಇನ್ನುಳಿದವರಿಗೆಎಷ್ಟುಎಂಬುದುಅಖೈರುಆಗಬೇಕಾಗಿದೆ. ಇದು ಇತ್ಯರ್ಥಗೊಂಡಲ್ಲಿ ಮುಂದಿನ ಹಾದಿ ಸುಗಮವಾಗಿ ಸಾಗಲಿದೆ ಎಂದು ಪಕ್ಷದ ಉನ್ನತ ಮೂಲಗಳು ತಿಳಿಸಿವೆ.

ಈ ಕಾರಣಕ್ಕಾಗಿಯೇ ಮುಖ್ಯಮಂತ್ರಿ ಬಿ.ಎಸ್ .ಯಡಿಯೂರಪ್ಪಪಾಳೆಯದಿಂದಇಲ್ಲಿವರೆಗೆ ಯಾರೊಬ್ಬರ ಹೆಸರನ್ನೂ ಅಂತಿಮಗೊಳಿಸಿಲ್ಲ. ವರಿಷ್ಠರು ಮೊದಲು ತಮ್ಮ ನಿಲುವನ್ನು ಸ್ಪಷ್ಟಪಡಿಸಲಿ. ನಂತರ ಹೆಸರುಗಳನ್ನು ಅಂತಿಮಗೊಳಿಸಬಹುದು ಎಂಬ ವಾದ ಕೇಳಿಬರುತ್ತಿದೆ. ಹಿಂದಿನ ರಾಜ್ಯಸಭಾ ಚುನಾವಣೆ ಮತ್ತು ವಿಧಾನ ಸಭೆಯಿಂದ ವಿಧಾನಪರಿಷತ್ತಿಗೆ ನಡೆದ ಚುನಾವಣೆಯಲ್ಲಿ ಬಿಜೆಪಿ ವರಿಷ್ಠರು ತಾವು ಎಂಥವರಿಗೆ ಆದ್ಯತೆ ನೀಡುತ್ತೇವೆ ಎಂಬ ಸಂದೇಶವನ್ನು ಸ್ಪಷ್ಟವಾಗಿ ನೀಡಿದ್ದಾರೆ. ಹೀಗಾಗಿ, ಈ ಬಾರಿಯ ನಾಮನಿರ್ದೇಶನದಲ್ಲೂ ಅದು ಪುನಾರವರ್ತನೆಗೊಳ್ಳುವುದರಲ್ಲಿ ಯಾವುದೇ ಸಂದೇಹ ವಿಲ್ಲ. ಪರಿಷತ್ತಿಗೆ ನಾಮನಿರ್ದೇಶನ ಮಾಡುವ ಸಂಬಂಧ ಈಗಾಗಲೇ ಕಳೆದ ಸಚಿವ ಸಂಪುಟ ಸಭೆಯಲ್ಲಿ ಮುಖ್ಯಮಂತ್ರಿಗಳಿಗೆಪರಮಾಧಿಕಾರನೀಡುವನಿರ್ಣಯ ಕೈಗೊಳ್ಳಲಾಗಿದೆ. ಮುಖ್ಯಮಂತ್ರಿಗಳ ಪರಮಾಧಿಕಾರವಾದರೂ ಪಕ್ಷದ ವರಿಷ್ಠರೊಂದಿಗೆ ಸಮಾಲೋಚನೆ ನಡೆಸದೆಯೇ ಹೆಸರುಗಳನ್ನು ಅಂತಿಮಗೊಳಿಸುವಂತಿಲ್ಲ. ಹಿಂದಿನ ಮಾತು ಬೇರೆ. ಈಗಿನ ಮಾತು ಬೇರೆ. ಈಗ ವರಿಷ್ಠರೊಂದಿಗೆ ಚರ್ಚೆ ನಡೆಸಿದ ಬಳಿಕವೇ ನಾಮನಿರ್ದೇಶನ ಪ್ರಕ್ರಿಯೆ ಕೈಗೆತ್ತಿಕೊಳ್ಳಲಾಗುವುದು ಎಂದು ಹಿರಿಯ ನಾಯಕರೊಬ್ಬರು 'ಕನ್ನಡಪ್ರಭ'ಕ್ಕೆ ಮಾಹಿತಿ ನೀಡಿದರು.

ವಿಧಾನಸಭೆಯಿಂದ ಪರಿಷತ್ತಿನ ಚುನಾವಣೆಗೆ ನಾಲ್ಕು ಅಭ್ಯರ್ಥಿಗಳ ಆಯ್ಕೆ ವೇಳೆ ವರಿಷ್ಠರು ಎರಡು ಸ್ಥಾನಗಳನ್ನು ಪಕ್ಷದ ಕಾರ್ಯಕರ್ತರಿಗೆ ನೀಡುವ ಇಂಗಿತ ವ್ಯಕ್ತಪಡಿಸಿದ್ದರು.